**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**<u>C.C. No.508/2025</u>**

**CW-3** **PW:2**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಿ ಡಿ ಅರ್ಜುನ್ |
| ತಂದೆ /ಗಂಡನ ಹೆಸರು | ಃ | ಧರ್ಮಕುಮಾರ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಬೈರಿದೇವರಕೊಪ್ಪ, ಹುಬ್ಬಳ್ಳಿ |

ದಿಃ **10.12.2025.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ತೋರಿದ ದಾಖಲಾತಿಗಳಲ್ಲಿ ನನ್ನ ಸಹಿ ಇದ್ದು ಅವುಗಳ ಪೈಕಿ ನೊಟಿಸನ್ನು ನಿಪಿ.4 ಎಂದು, ನನ್ನ ಸಹಿಯನ್ನು ನಿಪಿ.4(ಎ) ಎಂದು, ಹಾಗೂ ನಿಪಿ.2 ಸ್ಥಳ ಪಂಚನಾಮೆಯಲಿಲರುವ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನನಗೆ ತೊರಿದ ದಾಖಲಾತಿಯಲ್ಲಿ ನನ್ನ ಸಹಿ ಇದ್ದು ಸದರಿ ದಾಖಲಾತಿ ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ನಿಪಿ.5 ಎಂದು, ಅದರಲ್ಲಿ ಎರಡು ಸಹಿಗಳು ನನ್ನದು ಇರುತ್ತವೆ. ನಿಪಿ.4 ಮತ್ತು 2 ರಲ್ಲಿ ಯಾವಾಗ ಸಹಿಗಳನ್ನು ಯಾವ ದಿನಾಂಕದಂದು ಸಮಯ ಮತ್ತು ಸ್ಥಳದಲ್ಲಿ ಮಾಡಿದ್ದೇನೆ ಎನ್ನುವುದು ನೆನಪಿಲ್ಲ. ನನಗೆ ತೊರಿದ ಪೊಟೊದಲ್ಲಿ ಕ್ರಮ ಸಂಖ್ಯೆ 1 ರಲ್ಲಿ ಇದ್ದು ಈ ಪೊಟೊವನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ. ಈ ಪೊಟೊ ಎಲ್ಲಿ ಯಾವ ಸ್ಥಳದಲ್ಲಿ ಮತ್ತು ಯಾವಾಗ ತೆಗೆದಿದೆ ಎನ್ನುವುದು ಗೊತ್ತಿಲ್ಲ. ಸದರಿ ಜಾಗ ಯಾವದು ಎನ್ನುವುದು ಗೊತ್ತಿಲ್ಲ. ನನ್ನ ಜೊತೆ ನಿಪಿ.2 ಕ್ಕೆ ಯಾರು ಸಹಿ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಏನು ಕಾರಣಕ್ಕೆ ಸಹಿ ಮಾಡಿದೆವು ಎನ್ನುವುದು ಗೊತ್ತಿಲ್ಲ.

ನಿಪಿ.5 ರಲ್ಲಿ ಇರುವ ಸಹಿಗಳನ್ನು ಯಾವ ದಿನಾಂಕ, ಸಮಯ ಮತ್ತು ಸ್ಥಳದಲಪ್ಲಿ ಮಾಡಿದ್ದೇನೆ ಎನ್ನುವುದು ಗೊತ್ತಿಲ್ಲ. ನನ್ನ ಸಮಕ್ಷಮ ಪೊಲಿಸರು ನಿಪಿ.5 ರತಿಯಲಿ ಯಾವದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ಆರೋಪಿಯನ್ನು ಈ ಹಿಂದೆ ನಾನು ಎಲಿಲಯೂ ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು  ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ  ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಿಪಿ.4 ಕ್ಕೆ ಪೊಲಿಸರು ಇಂತಹ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡುವುದು ಇದೆ ಅಂತಾ ಹೇಳಿ ನೊಟೀಸು ಕೊಟ್ಟಿದ್ದು ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.  ದಿಃ 29.07.2024 ರಂದು ನೊಟಿಸ ಕೊಟ್ಟಿದ್ದಾರೆ ಎನ್ನುವುದು ನೆನಪಿಲ್ಲ. ನಿಪಿ.2(ಬಿ) ಸಹಿಯನ್ನು ಆರೋಪಿ 1 ರಿಂದ 4 ರವರು ನವನಗರದ ವಿರಬದ್ರೇಶ್ವರ ಗುಡಿ ಹತ್ತಿರ ಗಾಂಜಾ ಸೇವನೆ ಮಾಡಿದ ಸ್ಥಳ ಇದೆ ಅಂತಾ ಚಾಸಾಃ 1 ರವರು ತೊರಿದ್ದಾರೆ ಹಾಗೂ ಆಗ ಪೊಲಿಸರು ಪಂಚನಾಮೆ ಮಾಡಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಪಂಚನಾಮೆಯನ್ನು ಬೆಳಿಗ್ಗೆ 11.30 ರಿಂದ 12.15 ರವರೆಗೆ ಮಾಡಿದೆ ಎನ್ನುವುದು ನೆನಪಿಲ್ಲ. ದಿಃ 29.07.2024 ರಂದು ಪಂಚನಾಮೆ ಮಾಡಿದ್ದಾರೆ ಎನ್ನುವುದು ನೆನಪಿಲ್ಲ. ಪಂಚನಾಮೆ ಮಾಡಿದಾಗ ನಿಪಿ.3 ರಂತೆ ಪೊಟೊ ತೆಗೆದಿದ್ದಾರೆ ಎಂದರೆ ಸರಿ. ನನ್ನ ಜೊತೆ ಚಾಸಾಃ 2 ಜೊತೆಯಲ್ಲಿದ್ದು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.5 ರ 1 ನೆ ಸಹಿಯನ್ನು ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿತನಿಂದ ಒಂದು ಹಳದಿ ಬಣ್ಣದ transperent cover ನಲ್ಲಿದ್ದ ಬೀಜ, ಎಲೆ, ಕಾಂಡ, ಮೊಗ್ಗುಗಳಿರುವ 37 ಗ್ರಾಂ ತೂಕದ ಗಾಂಜಾ ವಶಪಡಿಸಿಕೊಂಡ ಕುರಿತು ಅಮರಗೋಳ ಎಪಿಎಂಸಿ ಯಾರ್ಡನ ನೀರಿನ ಟ್ಯಾಂಕ್ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ ಮಾಡಿದ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಇನ್ನೊಂದು ಸಹಿಯನ್ನು ನ್ಯಾೃಲಯದ ಮುಂದೆ ಇರುವ ಆರೋಪಿ ನೀಲಿ ಬಣ್ಣದ ಸ್ಯಾಮಸಂಗ ಮೊಬೈಲ್ ನಗದು ಹಣ ರೂ 300/-  3 transprent cover ಗಳನ್ನು ನಿಪಿ.5 ರಂತೆ ಮಾಡಿದ ಜಪ್ತಿ ಪಂಚನಾಮೆಯಲ್ಲಿ ನನ್ನ ಸಮಕ್ಷವ ವಶಪಡಿಸಿಕೊಂಡಿದೆ ಎಂದರೆ ಸರಿಯಲ್ಲ.  ದಿಃ 20.08.2024 ರಂದು ಸಾಯಂಕಾಲ 6.30 ರಿಂದ 7.15 ರವರೆಗೆ ಮಾಡಿದ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ.2 ರಿಂದ 5 ರ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.508/2025**

**CW-2** **PW:1**

| | |
|---|---|
| ಸಾಕ್ಷಿಯ ಹೆಸರು | : ಮಂಜುನಾಥ ಹಳ್ಳೂರ |
| ತಂದೆ /ಗಂಡನ ಹೆಸರು | : ಪಕ್ಕಿರಪ್ಪ |
| ವಯಸ್ಸು | : 35 ವರ್ಷ |
| ಉದ್ಯೋಗ | : ಖಾಸಗಿ ಕೆಲಸ |
| ವಾಸಸ್ಥಳ | : ನವನಗರ, ಹುಬ್ಬಳ್ಳಿ |

ದಿಃ **10.12.2025.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನನಗೆ ತೋರಿದ ದಾಖಲಾತಿಗಳಲ್ಲಿ ನನ್ನ ಸಹಿ ಇದ್ದು ಅವನ್ನು ನಿಪಿ.1 ನೋಟಿಸ ಎಂದು ಹಾಗೂ ನಿಪಿ.2 ಸ್ಥಳ ಪಂಚನಾಮೆ ಎಂದು, ನನ್ನ ಸಹಿಗಳನ್ನು ನಿಪಿ.1(ಎ) ಹಾಗೂ ನಿಪಿ.2(ಎ) ಎಂದು ಗುರುತಿಸಲಾಯಿತು. ಈ ಸಹಿಗಳನ್ನು ಯಾವ ದಿನಾಂಕದಂದು ಸಮಯ ಮತ್ತು ಸ್ಥಳದಲ್ಲಿ ಮಾಡಿದ್ದೇನೆ ಎನ್ನುವುದು ನೆನಪಿಲ್ಲ. ಪ್ರಜಾನಗರದಲ್ಲಿ ಕೆಲಸಕ್ಕೆ ಹೋದಾಗ ಪೊಲಿಸರು ನಮ್ಮನ್ನು ಕರೆಸಿ ಪೊಟೊ ಹೊಡೆದರು. ನನಗೆ ತೋರಿದ ಪೊಟೊದಲ್ಲಿ ಕ್ರಮ ಸಂಖ್ಯೆ 2 ರಲ್ಲಿ ಇದ್ದು ಈ ಪೊಟೊವನ್ನು ನಿಪಿ.3 ಎಂದು ಗುರುತಿಸಲಾಯಿತು. ಈ ಪೊಟೊ ಎಲ್ಲಿ ಯಾವ ಸ್ಥಳದಲ್ಲಿ ಮತ್ತು ಯಾವಾಗ ತೆಗೆದಿದೆ ಎನ್ನುವುದು ಗೊತ್ತಿಲ್ಲ. ಸದರಿ ಜಾಗ ಯಾವದು ಎನ್ನುವುದು ಗೊತ್ತಿಲ್ಲ. ನನ್ನ ಜೊತೆ ನಿಪಿ.2 ಕ್ಕೆ ಯಾರು ಸಹಿ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಏನು ಕಾರಣಕ್ಕೆ ಸಹಿ ಮಾಡಿದೆವು ಎನ್ನುವುದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಿಪಿ.1 ಕ್ಕೆ ಪೊಲಿಸರು ಇಂತಹ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡುವುದು ಇದೆ ಅಂತಾ ಹೇಳಿ ನೊಟೀಸು ಕೊಟ್ಟಿದ್ದು ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ 29.07.2024 ರಂದು ನೊಟಿಸ ಕೊಟ್ಟಿದ್ದರು ಎಂದರೆ ಸರಿ. ನಿಪಿ.2 ಸಹಿಯನ್ನು ಆರೋಪಿ 1 ರಿಂದ 4 ರವರು ನವನಗರದ ವಿರಬದ್ರೇಶ್ವರ ಗುಡಿ ಹತ್ತಿರ ಗಾಂಜಾ ಸೇವನೆ ಮಾಡಿದ ಸ್ಥಳ ಇದೆ ಅಂತಾ ಚಾಸಾಃ 1 ರವರು ತೊರಿದ್ದಾರೆ ಹಾಗೂ ಆಗ ಪೊಲಿಸರು ಪಂಚನಾಮೆ ಮಾಡಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಆ ಪಂಚನಾಮೆಯನ್ನು ಬೆಳಿಗ್ಗೆ 11.30 ರಿಂದ 12.15 ರವರೆಗೆ ಮಾಡಿದೆ ಎಂದರೆ ಸರಿ. ದಿಃ 29.07.2024 ರಂದು ಪಂಚನಾಮೆ ಮಾಡಿದ್ದಾರೆ ಎಂದರೆ ಸರಿ. ಪಂಚನಾಮೆ ಮಾಡಿದಾಗ ನಿಪಿ.3 ರಂತೆ ಪೊಟೊ ತೆಗೆದಿದ್ದಾರೆ ಎಂದರೆ ಸರಿ. ನನ್ನ ಜೊತೆ ಚಾಸಾಃ 3 ಜೊತೆಯಲ್ಲಿದ್ದು ಸಹಿ ಮಾಡಿದ್ದಾರೆ ಎಂದರೆ ಸರಿ.

**ಪಾಟಿಸವಾಲುಃ ಆರೋಪಿ ಪರ ಶ್ರೀ ಸಿ ಬಿ ಜಿ ವಕೀಲರಿಂದಃ**

ನಾನು ಶಾಮಿಯಾನದ ಕೆಲಸ ಮಾಡುತ್ತೇನೆ. ಆರ್ಡರ್ ಹೇಗೆ ಇರುತ್ತವೆ ಆ ತರಹ ಕೆಲಸದ ವೇಳೆ ಇರುತ್ತದೆ. ದಿಃ 29.07.2024 ರಂದು ನಾನು ಕೆಲಸಕ್ಕೆ ಹೋಗಿದ್ದೆ ಎಂದರೆ ಸರಿ. ಆ ದಿವಸ ಬೆಳಿಗ್ಗೆಯಿಂದ ಸಾಯಂಕಾಲವರೆಗೆ ಶಾಮಿಯಾನ ಕೆಲಸ ಇತ್ತು ಎಂದರೆ ಸರಿ. ಪೊಲಿಸರು ಸಹಿ ಮಾಡು ಅಂದಾಗ ಸಹಿ ಮಾಡಿದ್ದೇನೆ ಯಾವದಕ್ಕೆ ಏನು ಎನ್ನುವುದು ಮಾಹಿತಿ ಇಲ್ಲ ಎಂದರೆ ಸರಿ. ಯಾರು ಜಾಗ ತೊರಿಸಿದರು ಏನು ಬರೆದಿದ್ದಾರೆ ಎನ್ನುವುದು ಗೊತ್ತಿಲ್ಲ ಎಂದರೆ ಸರಿ. ಪೊಲಿಸರು ಏನಕ್ಕೆ ಪಂಚನಾಮೆ ಮಾಡುತ್ತಿದ್ದಾರೆ ಎನ್ನುವುದು ಗೊತ್ತಿಲ್ಲ ಎಂದರೆ ಸರಿ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.